

ಅವಳು ಒಳಗೆ ಬಂದಾಗ ಅವಳ ಮುಖದಲ್ಲಿ ನಗು ಇನ್ನೂ ಮಾಸಿರಲಿಲ್ಲ.

★★★

'ಹರ್ಬರ್ಟ್ ಸಂಜೆ ಮನೆಗೆ ಬರುವಾಗ ಮತ್ತೆ ಏನಾದರು ತಮಾಷೆಗಳನ್ನು ಯೋಚಿಸಿಕೊಂಡು ಬಂದಿರುತ್ತಾನೆ ನೋಡುತ್ತಿರಿ...' ಊಟಕ್ಕಿಡುವಾಗ ಗಂಡನಿಗೆ ಹೇಳಿದಳು ಮಿಸೆಸ್ ವೈಟ್.

'ಅದರಲ್ಲಿ ಅನುಮಾನವೇ ಇಲ್ಲ!' ಎಂದ ಮಿಸ್ಟರ್ ವೈಟ್ ಗ್ಲಾಸಿಗೆ ಬಿಯರನ್ನು ಹುಯ್ಯುತ್ತಾ, 'ಒಂದು ಮಾತ್ರ ನಿನ್ನಾಣೆಗೂ ನಿಜ ಕಣೆ. ರಾತ್ರಿ ಆ ಕೋತಿಯ ಪಂಜ ನನ್ನ ಕೈಯಲ್ಲಿ ಮಿಸುಕಾಡಿತು'.

'ಅದು ನಿಮ್ಮ ಭ್ರಮೆ ಡಿಯರ್, ಮತ್ತೇನಲ್ಲ!' ಮಿಸೆಸ್ ವೈಟ್ ಅವನನ್ನು ಸಮಧಾನ ಪಡಿಸಿದಳು. 'ಇಲ್ಲ. ಅದು ಮಿಸುಕಾಡಿತು.' ಅವನು ಕೊಂಚ ದನಿ ಎತ್ತರಿಸಿ ಹೇಳಿದ.

ಮಿಸೆಸ್ ವೈಟಳ ದೃಷ್ಟಿ ಕಿಟಕಿಯ ಹೊರಗಿತ್ತು. ಹೊರಗಡೆ, ಒಬ್ಬ ಅಪರಿಚಿತ ವ್ಯಕ್ತಿ ಒಳಗೆ